# “ಬೀಜದಿಂದ ಮೇಜಿನವರೆಗೆ” ಕಾರ್ಯಕ್ರಮದಡಿಯಲ್ಲಿ ಪಟ್ಟಣ ಪ್ರದೇಶದ ಕೃಷಿಕರ ಸಂಘಗಳನ್ನು ಮತ್ತು ಅವರ ಮಾರಾಟ ಸಾಮಾರ್ಥ್ಯವನ್ನು ಬಲಪಡಿಸುವಿಕೆ

ವ್ಯವಸಾಯ ಭಾರತ ದೇಶದ ಬೆನ್ನೆಲುಬು ಹಾಗೆಯೇ ರೈತ ಅನ್ನದಾತನಾಗಿ ಗುರುತಿಸಿಕೊಂಡಿದ್ದಾನೆ. ಕೃಷಿಯು ಪ್ರಮುಖವಾಗಿ ಗ್ರಾಮೀಣ ಪ್ರದೇಶದಲ್ಲಿ ಬೇರೂರಿದ್ದು ತನ್ನದೆ ಆದ ಛಾಪು ಮೂಡಿಸಿದೆ. ಗ್ರಾಮೀಣ ಪ್ರದೇಶದ ರೈತರಿಗೆ ಸರ್ಕಾರ ಮತ್ತು ಇತರ ಸಂಘ ಸಂಸ್ಥೆಗಳು ಹಲವಾರು ರೀತಿಯಲ್ಲಿ ಬೆಂಬಲವನ್ನು ಮತ್ತು ಮಾರ್ಗದರ್ಶನವನ್ನು ನೀಡುತ್ತಿವೆ.

ಪಟ್ಟಣ ಪ್ರದೇಶದಲ್ಲಿ ಕೃಷಿಯು ಕೂಡಾ ಒಂದು ಪ್ರಮುಖ ಆದಾಯೋತ್ಪನ್ನ ಚಟುವಟಿಕೆಯಾಗಿ ರೂಪುಗೊಂಡಿದ್ದು, ಸರ್ಕಾರ ಹಾಗೂ ಸರ್ಕಾರೇತರ ಸಂಸ್ಥೆಗಳಿಂದ ನಿರ್ಲಕ್ಷ್ಯಕ್ಕೊಳಪಟ್ಟಿದೆ. ಇದರಿಂದಾಗಿ ಪಟ್ಟಣ ಪ್ರದೇಶದ ರೈತರು ತಮ್ಮ ಉತ್ಪನ್ನಗಳಿಗೆ ಒಳ್ಳೆಯ ಮಾರಾಟ ವ್ಯವಸ್ಥೆ, ತಾಂತ್ರಿಕ ಮತ್ತು ನಿರ್ವಹಣಾ ಸಲಹೆಗಳಿಂದ ವಂಚಿತರಾಗಿದ್ದರೆ. ಆದ ಕಾರಣ ಪಟ್ಟಣ ಪ್ರದೇಶದ ರೈತರು ತಮ್ಮ ಕುಲ ಕಸುಬಾದ ಕೃಷಿಯಿಂದ ದೂರ ಸರಿಯುತ್ತಿರುವುದು ಕಂಡು ಬಂದಿದೆ. ಈ ಪರಿಸ್ಥಿತಿ ಇದೆ ರೀತಿ ಮುಂದುವರಿದರೆ ನಗರೀಕರಣ ಹೆಚ್ಚುಗೊಂಡು ಪರಿಸರದ ಅಸಮತೋಲನ ಮತ್ತು ಆಹಾರದ ಅಭಾವ ಹೆಚ್ಚಾಗಿ ಅಪೌಷ್ಠಿಕತೆಗೆ ದಾರಿಯಾಗುತ್ತದೆ.

ಈ ಹಿನ್ನೆಲೆಯಲ್ಲಿ ಪಟ್ಟಣ ಪ್ರದೇಶದ ಕೃಷಿಯಲ್ಲಿ ಸುಧಾರಣೆ ತರುವ ನಿಟ್ಟಿನಲ್ಲಿ, ನಗರ ಕೃಷಿ ಮತ್ತು ಆಹಾರ ಭದ್ರತೆಯ ಸಂಪನ್ಮೂಲ ಕೇಂದ್ರ (RUAF Foundation), ಅಂತರಾಷ್ಟ್ರೀಯ ನೀರು ನಿರ್ವಹಣಾ ಸಂಸ್ಥೆ (IWMI) ಮತ್ತು ಧಾನ್ ಫೌಂಡೆಷನ್‌ರವರ ಸಹಯೋಗದೊಂದಿಗೆ “ಬೀಜದಿಂದ ಮೇಜಿನವರೆಗೆ (From Seed to Table)” ಎಂಬ ಪ್ರಾಯೋಗಿಕ ಪ್ರಾಯೋಜನೆಯನ್ನು ಮಾಗಡಿ ಪುರಸಭೆಯ ವ್ಯಾಪ್ತಿಯಲ್ಲಿ ಬರುವ 9, 10 ಮತ್ತು 11(ಹೊಂಬಾಳಮ್ಮನಪೇಟೆ ಮತ್ತು ಹೊಸಪೇಟೆ) ವಾರ್ಡ್‌ಗಳಲ್ಲಿ ಅನುಷ್ಠಾನಗೊಳಿಸಲು ತೀರ್ಮಾನಿಸಲಾಗಿದೆ.

ಪಟ್ಟಣ ಪ್ರದೇಶದ ಕೃಷಿಕರ ಸಂಘಗಳನ್ನು ಮತ್ತು ಅವರ ಮಾರಾಟ ಸಾಮಾರ್ಥ್ಯವನ್ನು ಬಲಪಡಿಸುವುದು ಈ ಪ್ರಾಯೋಜನೆಯ ಮುಖ್ಯ ಉದ್ದೇಶವಾಗಿದೆ. ಹಾಗಾಗಿ 9, 10 ಮತ್ತು 11 ನೇ ವಾರ್ಡ್‌ಗಳಲ್ಲಿ ಯಾವುದಾದರು ರೈತರ ಅಥವಾ ರೈತ ಮಹಿಳೆಯರ ಸಂಘಗಳು ಕಾರ್ಯ ನಿರ್ವಹಿಸುತ್ತಿದ್ದರೆ ಅಂತಹ ಸಂಘಗಳ ಮೂಲಕ ಈ ಪ್ರಾಯೋಗಿಕ ಪ್ರಾಯೋಜನೆಯನ್ನು

ಅನುಷ್ಠಾನಗೊಳಿಸಬಹುದಾಗಿದೆ. ಈ ಮೇಲ್ಕಂಡ ವಾರ್ಡ್‌ಗಳಲ್ಲಿ ಯಾವುದೇ ಸಂಘಗಳು ಇಲ್ಲವಾದಲ್ಲಿ ಹೊಸದಾಗಿ ಸಂಘಗಳನ್ನು ರಚಿಸಿ ಅವುಗಳ ಮೂಲಕ ಈ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಬೇಕಾಗಿದೆ.

ಈ ಪ್ರಾಯೋಜನೆಯ ಮುಖ್ಯ ಉದ್ದೇಶಗಳು

- ಮಾರುಕಟ್ಟೆ ವಿಶ್ಲೇಷಣೆಯ ಆಧಾರದ ಮೇಲೆ ಅತಿ ಹೆಚ್ಚು ಬೇಡಿಕೆಯುಳ್ಳ/ಅವಕಾಶವುಳ್ಳ ಉತ್ಪನ್ನವನ್ನು ಗುರುತಿಸುವುದು
- ಆ ಉತ್ಪನ್ನದ ಉತ್ಪಾದನೆ ಮತ್ತು ಮಾರಟ ವ್ಯವಸ್ಥೆಯಲ್ಲಿರುವ ನ್ಯೂನತೆಗಳನ್ನು ಗುರುತಿಸಿ ಸರಿಪಡಿಸುವುದು
- ಅಗತ್ಯವಿರುವ ಸಂಘಗಳನ್ನು ರಚಿಸಿ ಅವುಗಳ ಮೂಲಕ ತಾಂತ್ರಿಕ ಹಾಗೂ ಸಾಂಸ್ಥಿಕ ಬದಲಾವಣೆ ತರುವುದು ಮತ್ತು ಪಟ್ಟಣ ಪ್ರದೇಶದ ಕೃಷಿಯನ್ನು ಲಾಭದಾಯಕವಾಗಿಸುವುದು

ಈ ಕಾರ್ಯಕ್ರಮವು ಮುಂದಿನ ಎರಡು ವರ್ಷಗಳವರೆಗೂ (2009, 2010) ಚಾಲನೆಯಲ್ಲಿದ್ದು ಪಟ್ಟಣ ಪ್ರದೇಶದ ಬಡ ರೈತರ ಸರ್ವತೋಮುಖ ಅಭಿವೃದ್ಧಿಗಾಗಿ ಕೈಜೋಡಿಸುತ್ತದೆ. ಈ ಕಾರ್ಯಕ್ರಮದಡಿಯಲ್ಲಿ ಸ್ಥಳಿಯ ಸರ್ಕಾರಿ ಇಲಾಖೆಗಳಾದ ಕೃಷಿ ಇಲಾಖೆ, ತೋಟಗಾರಿಕಾ ಇಲಾಖೆ, ಪಶು ಸಂಗೋಪನಾ ಇಲಾಖೆ, ತಾಲುಕಾ ಕೃಷಿ ಉತ್ಪನ್ನ ಮಾರುಕಟ್ಟೆ ಸಮೀತಿ, ಪುರಸಭೆ, ಮಾಗಡಿ ತಾಲೂಕಾ ಕಛೇರಿ ಹಾಗು ಇನ್ನಿತರ ಸರ್ಕಾರೇತರ ಸಂಸ್ಥೆಗಳು ಮತ್ತು ಕೃಷಿ ವಿಶ್ವವಿದ್ಯಾನಿಲಯ ಬೆಂಗಳೂರು ಇವರ ಮಾರ್ಗದರ್ಶನ ಹಾಗೂ ಬೆಂಬಲದೊಂದಿಗೆ ಕಾರ್ಯನಿರ್ವಹಿಸಲಾಗುವುದು.

ಈ ಕಾರ್ಯಕ್ರಮದ ಯಶಸ್ಸು ರೈತರ ಆಸಕ್ತಿ ಮತ್ತು ಪಾಲ್ಗೊಳ್ಳುವಿಕೆಯ ಮೇಲೆ ಅವಲಂಬಿತವಾಗಿದೆ. ಈ ದಿಸೆಯಲ್ಲಿ ಆಸಕ್ತ ರೈತರು ಮತ್ತು ರೈತ ಮಹಿಳೆಯರು (9, 10 ಮತ್ತು 11ನೇ ವಾರ್ಡ್) ಈ ಕಾರ್ಯಕ್ರಮದಲ್ಲಿ ಉತ್ಸುಕತೆಯಿಂದ ಪಾಲ್ಗೊಳ್ಳಬೇಕಾಗಿ ವಿನಂತಿಸಲಾಗಿದೆ.

ಯಾವುದೇ ಸಲಹೆ ಸೂಚನೆಗಳಿಗೆ ಈ ಕೆಳಕಂಡ ದೂರವಾಣಿಗಳನ್ನು ಸಂಪರ್ಕಿಸಬಹುದಾಗಿದೆ
9611768007, 9731443875 ಮತ್ತು 9972079912.

**ರೈತ ಭಾಂದವರೆ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ,**
**ನಿಮ್ಮದೆ ಆದ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿ.**

**ಜೈ ಜವಾನ್** **ಜೈ ಕಿಸಾನ್**